


## ರಜೆ ಕಳೆಯಲು ಸಕಾಲಿಕ ಸಲಹೆ

'ಸುಧಾ' ಮೇ 9ರ ಸಂಚಿಕೆಯ ಮುಖಪುಟ ಲೇಖನ ಸುಮಂಗಲಾ ಅವರ 'ರಜೆ ಕಳೆಯುವುದು ಹೇಗೆ?' ಸಕಾಲಿಕವಾಗಿತ್ತು. ಮಕ್ಕಳ ಬೌದ್ಧಿಕ, ಶಾರೀರಿಕ ಬೆಳವಣಿಗೆಗೆ ನಮ್ಮ ಸುತ್ತಲಿನಲ್ಲಿರುವುದನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ಚೆನ್ನಾಗಿ ವಿವರಿಸಿದ್ದಾರೆ.

-ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಮೊಳಕಾಲ್ಮುರು ಸುರೇಶ್, ಬಳ್ಳಾರಿ/ ಕೆ.ವಿ.ಸೀತಾರಾಂ, ಮಂಗಳೂರು/ ಜಿನ್ಸನ್ ಥಾಮಸ್, ನೆಲ್ಯಾಡಿ/ ನಿತ್ಯ ಎಸ್.,ಮೂಡಬಿದಿರೆ/ ಆರ್.ಆಶಾ, ರಾಯಚೂರು

## ಕ್ರಿಕೆಟ್ ಆ ದಿನಗಳ ನೆನಪು

ಐಪಿಎಲ್ ಕ್ರಿಕೆಟ್ ಪಂದ್ಯಗಳ ಕುರಿತು 'ಸುಧಾ'ದಲ್ಲಿ ಪ್ರಕಟವಾಗುವ ಲೇಖನಗಳನ್ನು ಓದಿದಾಗ, ದುಡ್ಡಿನ ಆಸೆಗಾಗಿ ನಡೆಯುವ ಇಂದಿನ ಪಂದ್ಯಗಳಿಗಿಂತ– ಹಿಂದಿನ ಪಂದ್ಯಗಳು ಎಷ್ಟೊಂದು ಚೆನ್ನಾಗಿದ್ದವು. ಅವನ್ನು ನೋಡಲು ಖುಷಿಯಾಗುತ್ತಿತ್ತು ಎಂಬುದು ನೆನಪಾಯಿತು.

-ಮಹಮ್ಮದ್ ಶರೀಫ್, ಬೆಂಗಳೂರು

## ಸರ್ಕಾರದ ಪಾತ್ರವಿಲ್ಲವೆ?

ಅ.ಲ.ನರಸಿಂಹನ್‌ರ 'ಮನೆಯೇ ಕಲಾ ಗ್ರಂಥಾಲಯ' ಆಗಿರುವುದನ್ನು ಗುಡಿಹಳ್ಳಿ ನಾಗರಾಜ ಪರಿಚಯಿಸಿದ್ದಾರೆ. ಸರ್ಕಾರ, ಅಕಾಡೆಮಿಗಳು ಏಕೆ ಕಣ್ಣುಮುಚ್ಚಿ ಕುಳಿತಿವೆ?

-ಟಿ.ಎನ್.ಸರಸ್ವತಿ, ತುರುವೇಕೆರೆ/ ಕೊಹಿಮ, ಬಸರಕೋಡು

## ಪುರಾತನ ಕಾಲದ ನೆನಪು

ಅಥೆನ್ಸ್ ಕುರಿತು 'ಇತಿಹಾಸದ ಕಾಲು ದಾರಿಯಲ್ಲಿ' ವಿ.ಪ್ರದೀಪ್‌ಕುಮಾರ್ ಲೇಖನ ಪುರಾತನ ಕಾಲವನ್ನು ಕಣ್ಮುಂದೆ ತಂದಿತು.

-ಎಚ್.ಆನಂದಕುಮಾರ್, ಚಿತ್ರದುರ್ಗ

## ಇಲ್ಲೇ ಇಷ್ಟು ಸುಂದರ!

ವಂಡರ್‌ಪುಟದಲ್ಲಿ ಪ್ರಕಟವಾಗಿರುವ 'ಪಿಂಕ್ ಲೇಕ್' (ಕೆಂಪು ಸರೋವರ) ಚಿತ್ರದಲ್ಲೇ ಇಷ್ಟೊಂದು ವಿಶೇಷವಾಗಿರುವಾಗ –ಅಲ್ಲಿಯೇ ಹೋಗಿ ನೋಡಿದರೆ ಎಂತಹ ರೋಮಾಂಚನ ಉಂಟು ಮಾಡಬಲ್ಲದು ಎನಿಸಿತು.

-ಡಿ.ಎಸ್.ಪಂಕಜ ಸುಬ್ರಮಣ್ಯಂ, ಶ್ಯಾಮಸುಂದರ, ಬೆಂಗಳೂರು

## ಇಷ್ಟವಾದದ್ದೇ ಹೆಚ್ಚು

ಬಂಡಾಜೆ ಜಲಪಾತ, ಆರೋಗ್ಯಪುಟ, ಧಾರಾವಾಹಿ, ಸೆಲೆಬ್ರಿಟಿ, ನಿಮ್ಮಪುಟ, ಆಹಾರ, ಜಾಣರ ಪೆಟ್ಟಿಗೆ, ಕಥೆ, ಪೈ ಪ್ರಪಂಚ– ಎಲ್ಲ ಇಷ್ಟವಾದವು.

-ವೈ.ಯಂ.ಚಂದ್ರಶೇಖರ್, ಕೂಡಿಗೆ

## ಗೌಡರ ಸಹೃದಯತೆ

ಎಚ್.ಎಸ್.ರೋಹಿಣಿಯವರ 'ಜೀತಮುಕ್ತ' ಕತೆಯಲ್ಲಿ ಗೌಡರ ಸಹೃದಯತೆ ಹಿತವಾಗಿತ್ತು. ಸಾಯಿಲಕ್ಷ್ಮಿ ಅವರ 'ಒಂದು ನಿಮಿಷದ ಮೌನ' ಕಥೆ ಓದಿದಾಗ ಬಾಬು ಅವರಂತಹ ಉದಾರಿಗಳು ಈಗಲೂ ಇದ್ದಾರೆ ಎಂಬ ಸಂಗತಿ ಸಂತಸ ನೀಡಿತು.

-ಎಲ್.ಗಿರಿಜಾ ರಾಜ್, ಬೆಂಗಳೂರು

## ನವಿರಾದ ಛಡಿ ಏಟು

ಎರಡನೇ ಮದುವೆ ಮಾಡಿಕೊಳ್ಳಲು ಹೊರಟಿರುವ ಭೂಪ(ರಿಗೆ) ಡಾ. ವಿನೋದ ಛೆಬ್ಬಿಯವರು 'ಸುಖೀಭವ' ಅಂಕಣದಲ್ಲಿ ಮಾರ್ಮಿಕವಾಗಿ, ನವಿರಾಗಿ ಛಡಿ ಬೀಸಿದ್ದಾರೆ. ಬುದ್ಧಿ ಇದ್ದವರಾದರೆ ಅವರ ಮಾತಿನಲ್ಲಿರುವ ಕಳಕಳಿ ಅರ್ಥ ಮಾಡಿಕೊಂಡು ಬದಲಾಗಬೇಕು. ಆಗ ಸಾಮಾಜಿಕ ಸ್ವಾಸ್ಥ ಉಂಟಾಗುವುದರಲ್ಲಿ ಸಂಶಯವೇ ಇಲ್ಲ.

-ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ

## ಯಾವ ರಾಮಾಯಣದಲ್ಲಿದೆ?

ಏ.25ರ 'ಸುಧಾ' ಸಂಚಿಕೆಯಲ್ಲಿ ಟಿ.ಎಂ.ಸುಬ್ಬರಾಯರ 'ಗುಹ' ಕಥೆಯಲ್ಲಿ ಮುನಿಶಾಪದ ಪ್ರಸ್ತಾಪ ಬರುತ್ತದೆ. ಹಾಗೆಯೇ ಇಲ್ಲಿನ ಕೆಲವು ವಿವರಗಳು ವಾಲ್ಮೀಕಿ ರಾಮಾಯಣ ಹಾಗೂ ತುಳಸಿದಾಸರ 'ರಾಮಚರಿತ ಮಾನಸ'ದಲ್ಲಿ ಇಲ್ಲ. ಕಥೆಯಲ್ಲಿರುವ ಸನ್ನಿವೇಶಗಳು ಯಾವ ರಾಮಾಯಣದಲ್ಲಿ ಉಲ್ಲೇಖವಾಗಿವೆ ಎಂದು ಕಥೆಗಾರರು ತಿಳಿಸಿದರೆ, ಓದುಗರಿಗೆ ಹಾಗೂ ಅನೇಕ ಸ್ನಾತಕರಿಗೆ ಉಪಕಾರವಾಗುತ್ತದೆ.

-ಬಿ.ತಿಪ್ಪಣ್ಣ ಮರಿಕುಂಟೆ, ಚಳ್ಳಕೆರೆ

## 'ಸುಧಾ' ಎಂಬ ಸರ್ವಾಂಗ ಸುಂದರಿ

'ಸುಧಾ' ಎಂಬ ಅಬಾಲ ವೃದ್ಧರ ಮೆಚ್ಚಿನ ವಾರಪತ್ರಿಕೆಯಲ್ಲಿ– ಜಲಪಾತ ಕಂಡೆ, ಮಲೆನಾಡು ಸವಿದೆ, ಡೇಂಜರಸ್ ಗೇಲ್‌ನ ಕಂಡೆ, ಮನೆಯ ಗ್ರಂಥಾಲಯದಲ್ಲಿ ಕುಳಿತೆ, ರಜೆಯ ಮಜದಲ್ಲಿ ಯೋಗ ಶಿಕ್ಷಣ ಕಂಡೆ, ಜೀವ ವೈವಿಧ್ಯ ಕಂಡೆ, ಕೃಷಿ ಆಯುರ್ವೇದದ ಪಾಠ ಕಂಡೆ, ಪೈ ಲೆಕ್ಕ ಕಂಡೆ, ಅಡಿಗೆ ಮನೆ, ಚಿತ್ರ ಕಲಾವಿದರ ಚಿತ್ರ ಕಂಡೆ, ಟಿವಿಯಲ್ಲಿ 'ಶೀವಿ' ಕಂಡೆ, ಕಾಮಾಲೆ ಕಾಡುವುದೇಕೆ? ತಿಳಿದೆ, ನಗೆಹೊನಲು, ಮಕ್ಕಳೊಂದಿಗೆ ಆಟ ಆಡಿದೆ, ಅಥೆನ್ಸ್‌ಗೆ ಹೋಗಿ ಬಂದೆ. ಕೊನೆಗೆ ಸ್ಥಿರ ಶೀರ್ಷಿಕೆಗಳಲ್ಲಿ ನಾನೂ ಕಾಣಿಸಬೇಕೆಂಬ ಆಸೆ ಉಂಟಾಯಿತು.

-ಬಿ.ಎನ್. ಸೊಲ್ಲಾಪುರೆ, ಕಮಲನಗರ (ಬೀದರ ಜಿಲ್ಲೆ)

## ಪ್ರಾಜ್ಞರು ಬೆಳಕು ಚೆಲ್ಲಲಿ

ಮೇ 2ರ 'ಸುಧಾ' ಸಂಚಿಕೆಯಲ್ಲಿ 'ಧಾರ್ಮಿಕ ಕಾರ್ಯಕ್ರಮಗಳಿಗೆ ವಿಧವೆ ಏಕೆ ನಿಷಿದ್ಧಳು?' ಎಂದು ತಮ್ಮ ಲೇಖನದಲ್ಲಿ ದುರ್ಗಾ ಎಸ್. ಭಟ್ ಪ್ರಶ್ನಿಸಿದ್ದಾರೆ. ಮಠಾಧಿಪತಿಗಳನ್ನು ಹೊರತುಪಡಿಸಿ, ವೇದ ಉಪನಿಷತ್ ಅರಿತ ಇತರ ಪ್ರಾಜ್ಞರು ಈ ವಿಷಯದ ಮೇಲೆ ಬೆಳಕು ಚೆಲ್ಲಬೇಕೆಂದು ನಾನು ಮನವಿ ಮಾಡುತ್ತೇನೆ.

ಮೃತ ಮಹಿಳೆಯನ್ನೂ ಸಹ ವಿಧವೆಯೆಂದು ಪರಿಗಣಿಸಿ ಶ್ರಾದ್ಧಕಾರ್ಯ ಮಾಡುವ ಕಾರ್ಯ ನನಗೆ ಇತ್ತೀಚೆಗೆ ತಿಳಿದುಬಂತು. ಮೃತಜೀವಕ್ಕೂ ವಿಧವೆ ಪಟ್ಟ ಕಟ್ಟುವುದು ಎಷ್ಟರಮಟ್ಟಿಗೆ ಸರಿ? ಬಲ್ಲವರೇ ಹೇಳಬೇಕು.

-ಆರ್.ರೋಹಿಣಿ, ಬೆಂಗಳೂರು

## ಗಂಭೀರ ಚಿಂತನೆ

'ವಿಧವೆ ಏಕೆ ನಿಷಿದ್ಧಳು?' ಗಂಭೀರ ಚಿಂತನೆಗೆ ಹಚ್ಚಿತು.

-ತರಂಗಿಣಿ, ತುಮಕೂರು/ ವಿದ್ಯಾ ಕಾರ್ಕಳ/ ಪಿ.ಎನ್.ಶ್ರೀವತ್ಸ, ಬೆಂಗಳೂರು


॥ ಶ್ರೀ ಸಿದ್ಧಿ ವಿನಾಯಕ ಪ್ರಸನ್ನ॥



ಕೇರಳದ ಪ್ರಸಿದ್ಧ ಮಾಂತ್ರಿಕ ಜ್ಯೋತಿಷ್ಯರು ಪಂ. ಪೊದುವಾಳ್ ಎಸ್. ಕುಮಾರನ್

ಕೇರಳದ ಮಲಯಾಳಿ ಶ್ರೀ ಕುಟ್ಟಿಚ್ಚಾತನ್ ಪರಮ ಭಕ್ತರಾದ ಇವರು ನಿಮ್ಮ ಭವಿಷ್ಯವನ್ನು ನಿಖರವಾಗಿ ತಿಳಿಸುತ್ತಾರೆ. ವಾಹನ ಯೋಗ, ಸ್ತ್ರೀ-ಪುರುಷ ವಶೀಕರಣ, ಧನಯೋಗ, ವೈರಿಗಳಿಂದ ರಕ್ಷಣೆ, ಕೋರ್ಟ್, ಕಛೇರಿ, ಭೂಮಿ, ಮನೆ ಕೆಲಸಗಳು, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಮಾನಸಿಕ ಚಿಂತೆ, ಇನ್ನೂ ಅನೇಕ ನಿಮ್ಮ ಗುಪ್ತ ಸಮಸ್ಯೆಗಳಿಗೆ ಶೀಘ್ರ ಪರಿಹಾರವಿದೆ.

ಇಲ್ಲಿಯವರೆಗೂ ತಾವು ಎಷ್ಟೋ ಜ್ಯೋತಿಷ್ಯರಲ್ಲಿ ಹಾಗೂ ದೇವಿ ಭೂತಗಳಲ್ಲಿ ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೇ ಇದ್ದಲ್ಲಿ ಅಂತಹ ಯಾವುದೇ ಕಠಿಣ ಸಮಸ್ಯೆಗಳಿಗೆ ಕೇರಳದ ಮಲಯಾಳಿ ಶ್ರೀ ಕುಟ್ಟಿಚ್ಚಾತನ್ ಮಂತ್ರಶಕ್ತಿಯಿಂದ ಹಾಗೂ ಶಾಸ್ತ್ರೋಕ್ತ ಪದ್ಧತಿಯಿಂದ ಕೇವಲ 11 ದಿನದಲ್ಲಿ ಪರಿಹಾರವಿದೆ

ನಮ್ಮಲ್ಲಿ ಕೇಳುವ ಯಾವುದೇ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು. ದೂರವಾಣಿ ಹಾಗೂ ಪತ್ರದ ಮುಖಾಂತರ ವಿವರಗಳನ್ನು ಪಡೆಯಬಹುದು.

ವಿ.ಸೂ.: ಸತಿ–ಪತಿ ಕಲಹ, ಸವತಿಯಕಾಟ, ಸ್ತ್ರೀ–ಪುರುಷ ವಶೀಕರಣಕ್ಕೆ ಗಂಧರ್ವ ಸಮ್ಮೋಹಿನಿ ಯಂತ್ರ ಮಾಡಿಕೊಡುತ್ತಾರೆ.

ವಿಳಾಸ: ಕೇರಳದ ಜ್ಯೋತಿಷ್ಯರು, ಪಂ ಪೊದುವಾಳ್ ಎಸ್. ಕುಮಾರನ್ ಕರ್ನಾಟಕ ಬ್ಯಾಂಕ್ ಹಿಂಭಾಗ, ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದ ಹತ್ತಿರ (ಮನೆ), ಹೊಸಪೇಟೆ, ಬಳ್ಳಾರಿ ಜಿಲ್ಲೆ. ಪಿನ್ ಕೋಡ್- 583201

ಮೊಬೈಲ್ 9880956386

ಪ್ರತಿ ತಿಂಗಳು ದಿನಾಂಕ: 09 ಮತ್ತು 10 ರಂದು ಬೆಂಗಳೂರಿನಲ್ಲಿಯೂ ಸಂಪರ್ಕಿಸಬಹುದು. ಭೇಟಿಗಾಗಿ ಮೊದಲು ಕರೆಮಾಡಿ